## ಅಧ್ಯಾಯ – 1 ಭಾರತ ಎದುರಿಸುತ್ತಿರುವ ಸವಾಲುಗಳು

1] ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಆ ದೇಶದ ಜನತೆಯ ಶೈಕ್ಷಣಿಕ ಮಟ್ಟ ಉನ್ನತವಾಗಿರಬೇಕು.

2] ಕ್ರಿ ಶ 2001 ರ ಜನಗಣತಿಯಂತೆ ಶೇ. 76 ರಷ್ಟು ಪುರುಷರು ಮತ್ತು ಶೇ. 54 ರಷ್ಟು ಮಹಿಳೆಯರು ಸಾಕ್ಷರರಾಗಿದ್ದಾರೆ.

3] ಅನಕ್ಷರತೆಯನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮಗಳು

1. ಕ್ರಿ ಶ 1978 ರಲ್ಲಿ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ.
2. ಸಂವಿಧಾನದ 93 ನೇ ತಿದ್ದುಪಡಿಯಂತೆ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಸಾರಲಾಗಿದೆ.
3. ಸಂವಿಧಾನದ 42 ನೇಯ ತಿದ್ದುಪಡಿಯ ಮೂಲಕ ಶಿಕ್ಷಣವನ್ನು ಸಮವರ್ತಿಪಟ್ಟಿಗೆ ಸೇರಿಸಲಾಗಿದೆ.
4. ಅನಕ್ಷರಸ್ತರನ್ನು ಸಾಕ್ಷರರನ್ನಾಗಿಸುವ ಉದ್ದೇಶದಿಂದ 1988 ರಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್‌ನ್ನು ಜಾರಿಗೆ ತರಲಾಗಿದೆ.
5. ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ.

4] ಭಾರತ ಸರ್ಕಾರ 1986 ರಲ್ಲಿ ನೂತನ ಶಿಕ್ಷಣ ನೀತಿಯನ್ನು ಜಾರಿಗೆ ತಂದಿತು.

5] ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣದ ಪ್ರಮುಖ ಗುರಿ – 14 ವರ್ಷದ ವಯಸ್ಸಿನೊಳಗಿರುವೆಲ್ಲಾ ಮಕ್ಕಳಿಗೂ ಶಿಕ್ಷಣ ಸೌಲಭ್ಯ ಒದಗಿಸುವದು.

6] ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣಕ್ಕಾಗಿ ಕೈಗೊಂಡ ಕ್ರಮಗಳು

1. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಉದಾ : ಕಟ್ಟಡ, ಕುಡಿಯುವ ನೀರು, ಶೌಚಾಲಯ ಇತ್ಯಾದಿ.
2. ಆರು ವರ್ಷ ತುಂಬಿದ ಎಲ್ಲಾ ಮಕ್ಕಳನ್ನೂ ಶಾಲೆಗೆ ದಾಖಲು ಮಾಡಿಸುವ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ.
3. ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಅಧಿಕ ಸವಲತ್ತುಗಳನ್ನು ಒದಗಿಸುವದು.
4. ಬಾಲಕೀಯರ ಶಿಕ್ಷಣಕ್ಕೆ ಅಧಿಕ ಒತ್ತು ನೀಡುವದು.
5. ಶಾಲೆಗೆ ದಾಖಲಾದ ಮಕ್ಕಳು ಶಾಲೆ ಬಿಟ್ಟು ಹೋಗದಂತೆ ಆಕರ್ಷಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಉದಾ : ಕ್ಷೀರ ಯೋಜನೆ, ಅಕ್ಷರದಾಸೋಹ(ಮಧ್ಯಾಹ್ನ ಬಿಸಿಯೂಟ), ಇತ್ಯಾದಿ
6. ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ, ಪಠ್ಯಪುಸ್ತಕ, ವಿದ್ಯಾರ್ಥಿವೇತನ, ಉಚಿತ ಸೈಕಲ್ ವಿತರಣೆ ಮುಂತಾದ ಯೋಜನೆಗಳ ಮೂಲಕ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಲಾಗಿದೆ.
7. ಮಕ್ಕಳನ್ನು ಆಕರ್ಷಿಸಲು ರಜಾ ಅವಧಿಯಲ್ಲಿ “ಚಿಣ್ಣರ ಅಂಗಳ”ದಂತಹ ಆಕರ್ಷಕ ಯೋಜನೆಯನ್ನು ರೂಪಿಸಲಾಗಿದೆ.

7]ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಿತಿಗತಿ ಸುಧಾರಿಸಲು ಕೈಗೊಂಡ ಕ್ರಮಗಳು

1. ರಾಜ್ಯ ಶಾಸನಸಭೆ ಮತ್ತು ಲೋಕಸಭೆಯಲ್ಲಿ ನಿರ್ದಿಷ್ಟ ಪ್ರಮಾಣದ ಸ್ಥಾನಗಳನ್ನು ಮೀಸಲಿಡಲಾಗಿದೆ.
2. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಸ್ಪರ್ಧಿಸಲೆಂದೇ ಹಲವಾರು ಚುನಾವಣಾ ಕ್ಷೇತ್ರಗಳನ್ನು ಕಾದಿರಿಸಲಾಗಿದೆ.
3. ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಯನ್ನು ಕಾಪಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರದ ಹುದ್ದೆಗಲ್ಲಿ ನಿರ್ದಿಷ್ಟ ಪ್ರಮಾಣದ ಪಾಲನ್ನು ಮೀಸಲಿಡಲಾಗಿದೆ.
4. ಅಸ್ಪೃಶ್ಯತೆ ಆಚರಣೆಗೆ ಸಂಬಂಧಪಟ್ಟ ಘಟನೆಗಳನ್ನು ತಿರ್ಮಾನಿಸಲು ವಿಶೇಷ ಮತ್ತು ಸಂಚಾರಿ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.
5. ಈ ವರ್ಗಗಳ ನಾಗರಿಕ ಹಕ್ಕುಗಳ ಅನುಸ್ಟಾನಕ್ಕಾಗಿ ಕ್ರಿ ಶ 1978 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಒಂದು ಆಯೋಗವನ್ನು ರಚಿಸಲಾಗಿದೆ.
6. ಈ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತ ವಸತಿ ನಿಲಯಗಳು, ವಿದ್ಯಾರ್ಥಿವೇತನ ಮತ್ತು ಬುಕ್ ಬ್ಯಾಂಕ್ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

8] ಕೋಮುವಾದವೆಂದರೆ ಅನ್ಯ ಧರ್ಮದ ಜನರ ಬಗ್ಗೆ ಸೈರಣೆ(ಸಹನೆ) ಇಲ್ಲದಿರುವದು.

9] ಪ್ರಾಂತಿಯತೆಯೆಂದರೆ ತನ್ನ ಪ್ರದೇಶ ಅಥವಾ ಪ್ರಾಂತದ ಕಾಳಜಿ ಕುರಿತು ವ್ಯಕ್ತಿಗಿರುವ ತಿವ್ರವಾದ ನಿಷ್ಠೆ ಮತ್ತು ಸಂಕುಚಿತ ಭಾವನೆಯಾಗಿದೆ.

10] ಸ್ತ್ರೀಯರ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಕೈಗೊಂಡ ಕ್ರಮಗಳು

1. ಸಂವಿಧಾನದ 14 ಮತ್ತು 15ನೆಯ ವಿಧಿಗಳು ಸಾರ್ವಜನಿಕ ಹುದ್ದೆಗಳಲ್ಲಿ ಸ್ತ್ರೀ ಹಾಗೂ ಪುರುಷರಿಗೆ ಸಮಾನ ಅವಕಾಶ ಕಲ್ಪಿಸಿದೆ.
2. ಬಾಲಕಿಯರ ಶಿಕ್ಷಣಕ್ಕೆ ಅಧಿಕ ಒತ್ತು ನೀಡಲಾಗಿದೆ.
3. ಅನೇಕ ಸ್ತ್ರೀ ವಯಸ್ಕ ಶಿಕ್ಷಣ ಕೇಂದ್ರಗಳನ್ನು ರಚಿಸಲಾಗಿದೆ.
4. ಬಹುಪತ್ನಿತ್ವವನ್ನು ನಿಷೇಧಿಸಿದೆ.
5. ಬಾಲ್ಯವಿವಾಹ ಪದ್ಧತಿಯನ್ನು ರದ್ದು ಮಾಡಲಾಗಿದೆ.
6. ವಿಧವಾ ವಿವಾಹಕ್ಕೆ ಅನುಮತಿ ನೀಡಲಾಗಿದೆ.
7. ವರದಕ್ಷಣೆ ನಿಷೇದಿಸಲಾಗಿದೆ.
8. ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕೆಂದೇ ಮಹಿಳಾ ಆಯೋಗವನ್ನು ರಚಿಸಿದೆ.
9. ಆಸ್ತಿಯಲ್ಲಿ ಸ್ತ್ರೀಯರಿಗೆ ಭಾಗ ನೀಡಬೇಕೆಂಬ ಕಾನೂನನ್ನು ಜಾರಿಗೊಳಿಸಲಾಗಿದೆ.

11] ಕ್ರಿ ಶ 1989ರ ನವಂಬರ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಗುವಿನ ಹಕ್ಕುಗಳಿಗೆ ಸಂಬಂಧಿಸಿದಂತೆ ಒಂದು ದಾಖಲೆಯನ್ನು ಸಿದ್ಧಪಡಿಸಿತು.

12] ಸಮಾಜಘಾತಕ ಚಟುವಟಿಕೆಗಳು – ಕಳ್ಳಸಾಗಾಣಿಕೆ, ಭ್ರಷ್ಟಾಚಾರ, ಲಾಭಕೋರತನ & ವರದಕ್ಷಿಣೆ.

13] ಭ್ರಷ್ಟಾಚಾರ – ಲಂಚ ಕೊಡುವುದು ಮತ್ತು ಲಂಚ ಪಡೆಯುವದನ್ನು ಭ್ರಷ್ಟಾಚಾರ ಎಂದು ಕರೆಯುತ್ತಾರೆ. ಭ್ರಷ್ಟಾಚಾರ ನಿರ್ಮೂಲನೆಗೆಂದೇ 'ಲೋಕಾಯುಕ್ತ' ಎಂಬ ಸಂಸ್ಥೆಯನ್ನು ಸರಕಾರ ರಚಿಸಿದೆ.

14] ಲಾಭಕೋರತನ – ಅತಿ ಹೆಚ್ಚಿನ ಲಾಭ ಪಡೆಯಲು ಅನೈತಿಕ ಮಾರ್ಗ ಅನುಸರಿಸುವದು.

ಉದಾ – 1. ತೂಕ ಮತ್ತು ಅಳತೆಗಳಲ್ಲಿ ಮೋಸ. 2. ಕಲಬೆರಕೆ ವಸ್ತುಗಳ ಮಾರಾಟ

3. ಪದಾರ್ಥಗಳಿಗೆ ಅಧಿಕ ಬೆಲೆ ವಿಧಿಸುವದು. 4. ಅಕ್ರಮ ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸುವದು

15] ಲಾಭಕೋರತನ ತಡೆಗಟ್ಟಲು ಕೈಗೊಂಡ ಕ್ರಮಗಳು

1. ಪ್ರತಿ ಉತ್ಪಾದಿತ ವಸ್ತುವಿನ ತೂಕ ಅಥವಾ ಅಳತೆ, ಅದರ ಗರಿಷ್ಟ ಬೆಲೆ, ಉತ್ಪಾದನಾ ತಾರೀಖು ಮತ್ತು ಅದರ ಬಳಕೆಯ ದಿನಮಿತಿಗಳನ್ನು ಅದರ ಮೇಲೆ ಮುದ್ರಿಸಬೇಕೆಂದು ಕೈಗಾರಿಕೆಗಳ ಮೇಲೆ ಕಾನೂನಿನ ನಿಬಂಧನೆ ಇದೆ.
2. ಪದಾರ್ಥಗಳ ಗುಣಮಟ್ಟ ಕಾಪಾಡಲೆಂದೇ ಇಂಡಿಯನ್ ಸ್ಟ್ಯಾಂಡರ್ಡ್ ಸಂಸ್ಥೆ(ಐ.ಎಸ್.ಐ) ಸ್ಥಾಪಿಸಿದೆ.
3. ವ್ಯವಸಾಯ ಉತ್ಪನ್ನಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಸ್ತುವಿನ ಮೇಲೆ ಅಗ್‌ಮಾರ್ಕನ್ನು ಕಡ್ಡಾಯಗೊಳಿಸಿದೆ.
4. ಗ್ರಾಹಕರನ್ನು ಶೋಷಣೆಯಿಂದ ರಕ್ಷಿಸಲೆಂದೇ 1986 ರಲ್ಲಿ ಗ್ರಾಹಕ ರಕ್ಷಣಾ ಕಾನೂನು ರಚಿಸಿದೆ.
5. ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣೆಗೆ ಪಡಿತರ ಅಂಗಡಿಗಳನ್ನು ತೆರೆಯಲಾಗಿದೆ.
6. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಜನತಾ ಬಜಾರ್, ಸೂಪರ್ ಬಜಾರ್ ಮುಂತಾದ ಸಂಸ್ಥೆಗಳನ್ನು ಸ್ಥಾಪಿಸಿದೆ.

16] ವರದಕ್ಷಿಣೆಯೆಂದರೆ ಉಡುಗೊರೆ ರೂಪದಲ್ಲಿ ವರನಿಗೆ ನಗನಾಣ್ಯ, ಆಸ್ತಿ, ನಿವೇಶನ ಮುಂತಾದವುಗಳನ್ನು ನೀಡುವದಾಗಿದೆ.

ಕ್ರಿ ಶ 1961 ರಲ್ಲಿ ವರದಕ್ಷಿಣೆ ವಿರೋದಿ ಕಾನೂನು ಜಾರಿಗೊಳಿಸಿದ್ದು, 1986 ರಲ್ಲಿ ಈ ಕಾನೂನಿಗೆ ತಿದ್ದುಪಡಿಯನ್ನು ಮಾಡಿತು. ಇದರ ಪ್ರಕಾರ ವರದಕ್ಷಿಣೆ ಪಡೆಯುವ ವ್ಯಕ್ತಿಗೆ ಕಾನೂನಿನ ಪ್ರಕಾರ 5 ವರ್ಷಗಳ ಕಾರಾಗೃಹ ಮತ್ತು 15 ಸಾವಿರ ರೂಪಾಯಿ ದಂಡ ವಿಧಿಸಲಾಗುವದು.

17] ಕಳ್ಳ ಸಾಗಾಣಿಕೆ ಎಂದರೆ ತೆರಿಗೆ ಕೊಡದೆ ವಿದೇಶಗಳಿಂದ ವಸ್ತುಗಳನ್ನು ತಂದು ಅಕ್ರಮವಾಗಿ ಮಾರಾಟಮಾಡುವದು.

18] ಕಳ್ಳಸಾಗಾಣಿಕೆ ತಡೆಗಟ್ಟಲು ಕೈಗೊಂಡ ಕ್ರಮಗಳು

1. ಸಮುದ್ರದ ಕರಾವಳಿಯ ಉದ್ದಕ್ಕೂ ಕರಾವಳಿಯ ರಕ್ಷಕ ಪಡೆಯನ್ನು ರಚಿಸಲಾಗಿದೆ.

2. ವಿಮಾನ ನಿಲ್ದಾಣಗಳಲ್ಲಿ ಸುಂಕದ ಅಧಿಕಾರಿಗಳನ್ನು ನೇಮಿಸಲಾಗಿದೆ.

3. ಕಳ್ಳಸಾಗಾಣಿಕೆಯನ್ನು ಹತೋಟಿಯಲ್ಲಿರಿಸುವ ಉದ್ದೇಶಕ್ಕೆಂದೇ ಕೇಂದ್ರ ಸರಕಾರವು 'ವಿದೇಶಿ ವಿನಿಮಯ ಉಳಿಕೆ ಮತ್ತು ಕಳ್ಳಸಾಗಾಣಿಕೆಯನ್ನು ತಡೆಗಟ್ಟುವ ಶಾಸನ ರಚಿಸಿದೆ. ಇದನ್ನು ಸಂಕ್ಷಿಪ್ತವಾಗಿ ಕಾಫಿಮೋಸಾ ಎಂದು ಕರೆಯುತ್ತಾರೆ.

ಶ್ರೀ ಶರಣಬಸಪ್ಪ ಎಲ್ ಗೂಡುರು ಸರಕಾರಿ ಪ್ರೌಢ ಶಾಲೆ ಗುಂಡ ತಾ : ಸಿಂಧನೂರು ಜಿ : ರಾಯಚೂರು

## ಅಧ್ಯಾಯ – 2 ಭಾರತ ಮತ್ತು ಪ್ರಪಂಚ – ವಿಶ್ವಸಂಸ್ಥೆ

1] ವಿಶ್ವಸಂಸ್ಥೆಯ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು

ಅಮೇರಿಕಾದ ಅಧ್ಯಕ್ಷ ಎಫ್ ಡಿ ರೂಸವೆಲ್ಟ್, ಇಂಗ್ಲಂಡಿನ ಪ್ರದಾನಿ ಚರ್ಚಿಲ್, ರಷ್ಯಾದ ಅಧ್ಯಕ್ಷ ಸ್ಟಾಲಿನ್.

2] ವಿಶ್ವಸಂಸ್ಥೆಯು ಅಕ್ಟೋಬರ 24 1945 ರಂದು ಅಸ್ಥಿತ್ವಕ್ಕೆ ಬಂದಿತು. ಇಂದು ವಿಶ್ವಸಂಸ್ಥೆಯ 192 ಸದಸ್ಯ ರಾಷ್ಟ್ರಗಳನ್ನು ಹೊಂದಿದೆ.

3] ವಿಶ್ವಸಂಸ್ಥೆಯ ಉದ್ದೇಶಗಳು

1. ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವದು.

2. ಸಮಾನತೆಯ ಆಧಾರದ ಮೇಲೆ ವಿಶ್ವದಲ್ಲಿನ ವಿವಿಧ ರಾಷ್ಟ್ರಗಳಲ್ಲಿ ಸ್ನೇಹ ಸಂಬಂಧವನ್ನು ಬೆಳೆಸುವದು.

3. ವಿಶ್ವದಲ್ಲಿನ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಹಾಗೂ ಮಾನವನ ಮೂಲಭೂತ ಹಕ್ಕುಗಳನ್ನು ರಕ್ಷಿಸುವದು.

4] ವಿಶ್ವಸಂಸ್ಥೆಯ ಪ್ರಮುಖ ಅಂಗ ಸಂಸ್ಥೆಗಳು

1. ಸಮಾನ್ಯ ಸಭೆ 2. ಭದ್ರತಾ ಸಮಿತಿ 3. ಸಾಮಾಜಿಕ ಹಾಗೂ ಆರ್ಥಿಕ ಸಮಿತಿ

4. ಧರ್ಮದರ್ಶಿ ಸಮಿತಿ 5. ಸಚಿವಾಲಯ 6. ಅಂತರಾಷ್ಟ್ರೀಯ ನ್ಯಾಯಾಲಯ

5] ಸಾಮಾನ್ಯ ಸಭೆಯ ಕಾರ್ಯಗಳು

1. ಪ್ರತಿ ವರ್ಷ ಸಪ್ಟಂಬರ್ ತಿಂಗಳಲ್ಲಿ ಸಾಮಾನ್ಯ ಸಭೆಯ ಅಧಿವೇಶನವನ್ನು ಕರೆಯುವದು.

2. ಪ್ರಮುಖ ವಿಷಯಗಳನ್ನು ಬಹುಮತದ ಸಿದ್ದಾಂತದಂತೆ ಅಥವಾ 2/3 ಮತಗಳ ಬೆಂಬಲದಿಂದ ನಿರ್ಧರಿಸುವದು.

3. ವಿಶ್ವಸಂಸ್ಥೆಯ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತದೆ.

4. ಪ್ರತಿಯೊಂದು ರಾಷ್ಟ್ರವು ನೀಡಬಹುದಾದ ಚಂದಾಹಣವನ್ನು ನಿಗದಿ ಮಾಡುತ್ತದೆ.

6] ಭದ್ರತಾ ಸಮಿತಿಯ ರಚನೆ

1. ಈ ಸಮಿತಿಯು 25 ಪ್ರತಿನಿಧಿಗಳಿಂದು ಕೂಡಿದ್ದು, ಅದರಲ್ಲಿ 5 ಕಾಯಂ ಸದಸ್ಯರು ಹಾಗೂ 10 ಹಂಗಾಮಿ ಸದಸ್ಯರನ್ನು ಹೊಂದಿದೆ.

2. ಇಂಗ್ಲಂಡ, ಅಮೇರಿಕಾ, ರಷ್ಯಾ, ಪ್ರಾನ್ಸ್, ಚೀನಾ ಕಾಯಂ ಸದಸ್ಯ ರಾಷ್ಟ್ರಗಳು

3. ಕಾಯಂ ಸದಸ್ಯರಿಗೆ 'ವಿಟೋ' ಅಂದರೆ ನಿಷೇದಾತ್ಮಕ ಮತ ಚಲಾಯಿಸುವ ವಿಶೇಷ ಅಧಿಕಾರ ಇದೆ.

7] ಭದ್ರತಾ ಸಮಿತಿಯ ಕಾರ್ಯಗಳು

1. ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುತ್ತದೆ.

2. ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ನೂತನ ಸದಸ್ಯರ ಆಯ್ಕೆಯನ್ನು ಶಿಫಾರಸ್ಸು ಮಾಡುವ ಅಥವಾ ತಿರಸ್ಕರಿಸುವ ಆಧಿಕಾರವನ್ನು ಹೊಂದಿದೆ.

3. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಅಭ್ಯರ್ಥಿಯನ್ನು ಸೂಚಿಸುವ ಅಧಿಕಾರವನ್ನು ಹೊಂದಿದೆ.

4. ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಆಯ್ಕೆಯಲ್ಲಿ ಭಾಗವಹಿಸುತ್ತದೆ.

8] ಆರ್ಥಿಕ ಮತ್ತು ಸಮಾಜಿಕ ಸಮಿತಿಯ ಗುರಿ – ವಿಶ್ವದ ರಾಷ್ಟ್ರಗಳಲ್ಲಿ ಶಾಂತಿ ಮತ್ತು ಪ್ರಗತಿ ಸಾಧಿಸಲು ಸೂಕ್ತವಾದ ಆರ್ಥಿಕ ಮತ್ತು ಸಮಾಜಿಕ ವಾತಾವರಣವನ್ನು ಕಲ್ಪಿಸುವದು.

9] ವಿಶ್ವಸಂಸ್ಥೆಯ ಸಚಿವಾಲಯದ ಮುಖ್ಯ ಕಛೇರಿ ನ್ಯೂಯಾರ್ಕ ಬಳಿಯ ಲೇಕ್‌ಸಕ್ಸೆಸ್‌ನಲ್ಲಿದೆ.

ವಿಶ್ವಸಂಸ್ಥೆಯ ಪ್ರದಾನಕಾರ್ಯದರ್ಶಿ ದಕ್ಷಿಣ ಕೊರಿಯಾದ ಬಾನ್ ಕಿ ಮೂನ್ – ಅಧಿಕಾರವಧಿ 5 ವರ್ಷ

10] ಅಂತರಾಷ್ಟ್ರೀಯ ನ್ಯಾಯಾಲಯದ ಕೇಂದ್ರ ಕಚೇರಿ ಹಾಲೆಂಡನ 'ದಿ ಹೇಗ್' ನಗರದಲ್ಲಿದೆ.

11] ಆಹಾರ ಕೃಷಿ ಸಂಸ್ಥೆ ಸ್ಥಾಪನೆ – 1945, ಕೇಂದ್ರ ಕಚೇರಿ – ಇಟಲಿಯ ರಾಜದಾನಿ ರೋಮ್ ನಗರ

12] ಆಹಾರ ಕೃಷಿ ಸಂಸ್ಥೆ ಸ್ಥಾಪನೆಯ ಉದ್ದೇಶ – ವಿಶ್ವದ ಜನರ ಜೀವನದ ಸ್ಥಿತಿಗತಿ ಉತ್ತಮಗೊಳಿಸುವದು

13] ವಿಶ್ವ ಆರೋಗ್ಯ ಸಂಸ್ಥೆಯ ಮಹಾನ್ ಸಾಧನೆ – ಸಿಡುಬು ರೋಗದ ನಿವಾರಣೆ

14] ಯುನೆಸ್ಕೋ ಸ್ಥಾಪನೆ – 4 ನವಂಬರ್ 1946, ಕೇಂದ್ರ ಕಛೇರಿ – ಪ್ಯಾರಿಸ್ ನಗರ

15] ಯುನೆಸ್ಕೋ ಇದರ ವಿಸ್ತ್ರುತ ರೂಪ – ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ

16] ಯುನೆಸ್ಕೋದ ಗುರಿಗಳು

1. ಶಾಂತಿ ಸ್ಥಾಪನೆ.
2. ಮಾನವನ ಹಕ್ಕುಗಳನ್ನು ರಕ್ಷಿಸುವದು
3. ಶೈಕ್ಷಣಿಕ ಅಭಿವೃದ್ಧಿ ಸಾಧನೆ
4. ಮಾನವರ ವಿಕಾಸಕ್ಕೆಂದೇ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಳಕೆ.
5. ಪರಿಸರ ಹಾಗೂ ಮಾನವರ ನಡುವೆ ಸಮತೋಲನ
6. ಜನಸಂಖ್ಯಾ ನಿಯಂತ್ರಣದ ಬಗ್ಗೆ ಅರಿವು ಮೂಡಿಸುವದು.

17] ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಗುರಿ – ವಿಶ್ವಕಾರ್ಮಿಕ ವರ್ಗದ ಸ್ಥಿತಿಗತಿಗಳನ್ನು ಸುಧಾರಿಸುವದು.

18] ಯುನಿಸೆಫ್‌ನ ವಿಸ್ತ್ರುತ ರೂಪ – ವಿಶ್ವಸಂಸ್ಥೆಯ ಅಂತರಾಷ್ಟ್ರೀಯ ಮಕ್ಕಳ ತುರ್ತುನಿಧಿ

19] ಯುನಿಸೆಫ್ ಸ್ಥಾಪನೆಯ ಉದ್ದೇಶ – ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಮಕ್ಕಳ ಮತ್ತು ಮಾತೆಯರ ಜೀವನದ ಗುಣಮಟ್ಟವನ್ನು ಸುಧಾರಿಸುವದು.

ಯುನಿಸೆಪ್ ಕಾರ್ಡುಗಳನ್ನು ಪ್ರತಿಯೊಬ್ಬರೂ ಕೊಳ್ಳಬೇಕು ಯಾಕೆಂದರೆ ಈ ಕಾರ್ಡಿನ ಮಾರಾಟದಿಂದ ಬರುವ ಹಣವನ್ನು ಮಕ್ಕಳ ಕಲ್ಯಾಣಕ್ಕೆ ಉಪಯೋಗಿಸಲಾಗುತ್ತದೆ.

20] ಅಂತರಾಷ್ಟ್ರೀಯ ಹಣಕಾಸು ನಿಧಿ : ವಾಷಿಂಗ್‌ಟನ್ ಡಿ ಸಿ : : ವಿಶ್ವಬ್ಯಾಂಕ ; ವಾಷಿಂಗ್‌ಟನ್

21] ವಿಶ್ವಸಂಸ್ಥೆಯ ಸಾಧನೆಗಳು

1. ಕ್ರಿಶ 1946 ರಲ್ಲಿ ಇರಾನ್ ಮತ್ತು ರಷ್ಯಾ ದೇಶಗಳ ವಿವಾದ ಬಗೆಹರಿಸಿತು.
2. 1947ರ ಇಂಡೋನೇಷಿಯಾ ಸಮಸ್ಯೆ ಮತ್ತು ಗ್ರೀಸ್ ದೇಶದಲ್ಲಿನ ಅಂತರ್ಯುದ್ಧ ತಡೆಯಿತು.
3. ಕೊರಿಯಾಬಿಕ್ಕಟ್ಟನ್ನು ಬಗೆಹರಿಸಿ ದಕ್ಷಿಣ ಕೊರಿಯಾದ ಸ್ವಾತಂತ್ರ್ಯವನ್ನು ರಕ್ಷಿಸಿತು.
4. 1956 ರ ಸುಯೇಜ್ ಕಾಲುವೆಯ ಬಿಕ್ಕಟ್ಟನ್ನು ಪರಿಹರಿಸಿತು.
5. ವಿಯೆಟ್ನಾಂ ಸಮಸ್ಯಗೆ ಪರಿಹಾರ ದೊರಕಿಸಿತು.
6. ಕ್ರಿ ಶ 1960 ರಲ್ಲಿ ಕಾಂಗೋ ಬಿಕ್ಕಟ್ಟನ್ನು ಬಗೆಹರಿಸಿತು.
7. ಕಾಶ್ಮೀರ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಿದರೂ ಅದು ಇನ್ನೂ ಜೀವಂತವಾಗಿಯೇ ಇದೆ.
8. ಕ್ರಿ ಶ 1989 ರ ನಮೀಬಿಯಾ ಹಾಗೂ ಅಂಗೋಲಗಳ ಸ್ವಾತಂತ್ರ್ಯ ದೊರಕಿಸಿತು.

9 ಕ್ರಿ ಶ 1991 ರಲ್ಲಿ ಕುವೈತ್‌ನ್ನು ಇರಾಕ್ ಆಕ್ರಮಣದಿಂದ ಮುಕ್ತಗೊಳಿಸಿತು.

22] ಭಾರತದ ವಿದೇಶಾಂಗ ನೀತಿ

1. ದಿವಂಗತ ಜವಾಹರಲಾಲ ನೆಹರುವರು ಭಾರತದ ವಿದೇಶಾಂಗ ನೀತಿಯ ಶಿಲ್ಪಿಯಾಗಿದ್ದಾರೆ.
2. ಭಾರತದ ವಿದೇಶಾಂಗ ನೀತಿಯಲ್ಲಿ ಅಹಿಂಸಾತತ್ವ, ಆದರ್ಶವಾದ, ಮಾನವೀಯ ಅನುಕಂಪ, ವ್ಯಾವಹಾರಿಕ ಕಾಠಿಣತೆಯನ್ನು ಕಾಣಬಹುದು.
3. ಭಾರತದ ವಿದೇಶಾಂಗ ನೀತಿಯು ಶಾಂತಿ ಹಾಗೂ ಸಹಬಾಳ್ವೆ ತತ್ವದ ಮೇಲೆ ಆಧಾರಿತವಾಗಿದೆ.
4. ವಿಶ್ವಶಾಂತಿ ಕಾಪಾಡಲೆಂದೇ ಎಲ್ಲಾ ರಾಷ್ಟ್ರಗಳೊಂದಿಗೆ ಸ್ನೇಹ ಹಾಗೂ ಸಹಬಾಳ್ವೆಯೊಂದಿಗೆ ಸಂಬಂಧಗಳನ್ನು ಮುಂದುವಿರಿಸಿಕೊಂಡು ಹೋಗಲು ನಿರ್ಧರಿಸಿತು.
5. ಅಲಿಪ್ತ ನೀತಿಯು ಪಂಚಶೀಲ ತತ್ವಗಳಿಂದ ಒಳಗೊಂಡಿದೆ.

23] ಪಂಚಶೀಲ ತತ್ವಗಳು : ಕ್ರಿ ಶ 1954 ರಲ್ಲಿ ಚೀನಾದ ಪ್ರದಾನಿ ಚೌ ಎನ್‌ಲಾಯ್ ಮತು ಪಂಡಿತ ನೆಹರುರವರು ಮಾಡಿಕೊಂಡ

ಒಪ್ಪಂದವು ಪಂಚಶೀಲ ತತ್ವಗಳನ್ನು ಒಳಗೊಂಡಿದೆ. ಅವುಗಳೆಂದರೆ –

1. ಪರಸ್ಪರರ ಪರಮಾಧಿಕಾರ ಮತ್ತು ಪ್ರದೇಶಿಕ ಐಕ್ಯತೆಗಳನ್ನು ಗೌರವಿಸುವದು. 2. ಪರಸ್ಪರರ ಮೇಲೆ ಆಕ್ರಮಣ ಮಾಡದೇ ಇರುವದು.

3. ದೇಶಗಳ ಒಳಾಡಳಿತದಲ್ಲಿ ಹಸ್ತಕ್ಷೇಪ ಮಾಡದೆ ಇರುವದು. 4. ಸಮಾನತೆ ಮತ್ತು ಪರಸ್ಪರ ಯಿತಸಾಧನೆಗೆ ಶ್ರಮಿಸುವದು.

5. ಶಾಂತಿಯುತ ಸಹಜೀವನ.

24] ಭಾರತ ಮತ್ತು ರಷ್ಯ ಸಂಬಂಧ

1. ಕಾಶ್ಮೀರ ಸಮಸ್ಯೆಗೆ ಸಂಬಂಧಿಸಿದಂತೆ ರಷ್ಯ ತನ್ನ ಬೆಂಬಲ ನೀಡಿದೆ. ಉದಾ : 1966ರ ತಾಷ್ಕೆಂಟ್ ಒಪ್ಪಂದ

2. ಕ್ರಿ ಶ 1971 ರಲ್ಲಿ ಭಾರತ – ರಷ್ಯಾ ನಡುವೆ ಪರಸ್ಪರ ಮೈತ್ರಿ, ಶಾಂತಿ ಹಾಗೂ ಸಹಕಾರಗಳ 20 ವರ್ಷದ ಒಪ್ಪಂದಕ್ಕೆ ಸಹಿ ಹಾಕಲಾಯಿತು.

3. ರಷ್ಯಾದ ಸಹಕಾರದಿಂದ ಬಿಲಾಯ್, ಬೊಕಾರೋಗಳಲ್ಲಿ ಉಕ್ಕಿನ ಕಾರ್ಖಾನೆಗಳನ್ನು ಸ್ಥಾಪಿಸಲಾಯಿತು.

4. ಹರಿದ್ವಾರದಲ್ಲಿ ರಷ್ಯಾ ಸಹಕಾರದಿಂದ ಭಾರಿ ವಿದ್ಯುತ್ ಸ್ಥಾವರದ ಘಟಕ ಸ್ಥಾಪಿಸಲಾಯಿತು.

25] ಭಾರತ ಬಾಂಗ್ಲಾ ದೇಶಗಳ ಸಂಬಂಧ ಕೆಡಲು ಕಾರಣ

1. ಚಿತ್ತಗಾಂಗ್ ಪರ್ವತ ಪ್ರದೇಶಗಳಿಂದ ಭಾರತಕ್ಕೆ ವಲಸೆ ಬರುತ್ತಿರುವ ಚಕ್ಮಾ ನಿರಾಶ್ರಿತರ ಸಮಸ್ಯೆ

2. ಮಾದಕವಸ್ತುಗಳ ಅಕ್ರಮ ಕಳ್ಳ ಸಾಗಾಣಿಕೆ

26] ಭಾರತ ಮತು ಪಾಕಿಸ್ತಾನ ಮದ್ಯೆ ಸೌಹಾರ್ದವಾದ ವಾತಾವರಣ ಇಲ್ಲ ಇದಕ್ಕೆ ಕಾರಣ –

1. ಕಾಶ್ಮೀರ ಸಮಸ್ಯೆ 2. ಮಿಲಿಟರಿ ಕೂಟಗಳೊಂದಿಗೆ ಪಾಕಿಸ್ತಾನದ ಸಂಬಂಧಗಳು

3. ಚೀನಾ ಮತ್ತು ಪಾಕ್ ಮೈತ್ರಿ 4. ನೀರಿನ ವಿವಾದ

4. ಎರಡು ರಾಷ್ಟ್ರಗಳಲ್ಲಿನ ಅಲ್ಪ ಸಂಖ್ಯಾತರ ನಿರಂತರ ಸಮಸ್ಯೆ 5. ವ್ಯಾಪಾರದ ಸಮಸ್ಯೆ 6. ಭಯೋತ್ಪಾದನೆ.

## ಅಧ್ಯಾಯ – 3 ವಿಶ್ವ ಸಮಸ್ಯೆಗಳು

1] ಕ್ರಿ ಶ 1776 : ಅಮೇರಿಕಾ ಸ್ವಾತಂತ್ರ್ಯ ಘೋಷಣೆ : : ಕ್ರಿ ಶ 1789 : ಫ್ರೆಂಚ ಕ್ರಾಂತಿ

2] ವಿಶ್ವಸಂಸ್ಥೆಯು ಡಿಸೆಂಬರ್ 10, 1948 ರಂದು ಮಾನವ ಹಕ್ಕುಗಳಿಗೆ ಸಂಬಂಧಪಟ್ಟಂತೆ ಸಾರಿ ಘೋಷಣೆ – "ಮಾನವರೆಲ್ಲರೂ ಹುಟ್ಟಿನಿಂದ ಸಮಾನರು ಮತ್ತು ಸ್ವತಂತ್ರರು". ಜಾತಿ, ವರ್ಣ, ಲಿಂಗ, ಭಾಷೆ, ಧರ್ಮ, ಆಸ್ತಿ ಅಥವಾ ಹುಟ್ಟಿನಿಂದ ಯಾವ ಭೇದಭಾವನೆಗಳಿಗೆ ಗುರಿಯಾಗದೆ ಸಮಾನ ಹಕ್ಕು ಹಾಗೂ ಗೌರವಗಳಿಗೆ ಪಾತ್ರಗಾಗಿದ್ದಾರೆ. ಎಂದು ಘೋಷಿಸಿತು.

3] ದಕ್ಷಿಣ ಆಫ್ರಿಕಾದಲ್ಲಿ ಅನುಸರಿಸಿದ ವರ್ಣಬೇಧ ನೀತಿ

1. ಬಿಳಿಯರು ಕರಿಯರನ್ನು ಅತ್ಯಂತ ಕ್ರೂರ ಮತು ದೌರ್ಜನ್ಯದಿಂದ ನಸೆಸಿಕೊಳ್ಳತ್ತಿದ್ದನ್ನು ವರ್ಣಭೇದ ನೀತಿ ಎನ್ನುವರು

2. ದಕ್ಷಿಣ ಆಫ್ರಿಕಾದಲ್ಲಿ ಅತ್ಯಂತ ಕ್ರೂರ ಹಾಗೂ ದಮನಕಾರಿ ವರ್ಣಭೇದ ನೀತಿಯನ್ನು ಅನುಸರಿಸಲಾಗುತ್ತಿತ್ತು.

3. ಕರಿಯರಿಗೆ ಮತದಾನದ ಹಕ್ಕನ್ನು ನಿರಾಕರಿಸಲಾಗಿತ್ತು.

4. ಕಪ್ಪು ಜನರನ್ನು ಗುಲಾಮರಂತೆ ಮಾರಾಟ ಮಾಡಲಾಗುತ್ತಿತ್ತು.

5. ನೆಲ್ಸನ್ ಮಂಡೆಲಾರ ನೇತೃತ್ವದಲ್ಲಿ ಕರಿಜನರು ದೀರ್ಘ ಹೋರಾಟ ನಡೆಸಿ ವರ್ಣಭೇದನೀತಿಯನ್ನು ಕೊನೆಗಾಣಿಸಿದರು. ಹಾಗಾಗಿ ಇವರನ್ನು ಆಫ್ರಿಕಾದ ಗಾಂಧಿ ಎಂದು ಕರೆಯುತ್ತಾರೆ.

4] ಅಮೇರಿಕಾದಲ್ಲಿ ವರ್ಣಭೇದ ನೀತಿ ವಿರುದ್ದವಾಗಿ ಹೋರಾಡಿದವರು ಮಾರ್ಟಿನ್ ಲೂಥರ್ ಕಿಂಗ್. ಇವರುನ್ನು ಅಮೇರಿಕಾದ ಗಾಂಧಿ ಎಂದು ಕರೆಯತ್ತಾರೆ.

5] ಜಗತ್ತಿನಲ್ಲಿ ಮೊದಲ ಬಾರಿಗೆ ವರ್ಣಭೇದ ನೀತಿಯನ್ನು ಪ್ರಭಲವಾಗಿ ಖಂಡಿಸಿದವರೆಂದರೆ ಅಮೇರಿಕಾ ದೇಶದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್‌ರವರು. ಇವರು 'ಜಗತ್ತಿನಲ್ಲಿ ಯಾರೂ ಗುಲಾಮರಲ್ಲ. ಹೀಗಾಗಿ ಯಾರು ಒಡೆಯರಲ್ಲ'. ಎಂದು ಘೋಷಿಸಿದರು.

6] ಕ್ರಿ ಶ 1963 ರಲ್ಲಿ  ಮಿತ ಅಣ್ವಸ್ತ್ರ ಪರೀಕ್ಷಾ ನಿರ್ಬಂಧ ಒಪ್ಪಂದಕ್ಕೆ ಅಮೇರಿಕಾ ಇಂಗ್ಲಂಡ & ರಷ್ಯ ಸಹಿ ಹಾಕಿವೆ.

ಈ ಒಪ್ಪಂದದಂತೆ ವಾತಾವರಣದಲ್ಲಿ, ಬಾಹ್ಯಾಕಾಶದಲ್ಲಿ ಹಾಗೂ ಸಮುದ್ರದ ತಳಗಳಲ್ಲಿ ಅಣ್ವಸ್ತ್ರಗಳ ಸಿಡಿತ ಪರೀಕ್ಷೆಗಳನ್ನು ನಿಷೇದಿಸಲಾಗಿದೆ. ಆದರೆ ಭೂಮಿಯ ತಳಭಾಗದಲ್ಲಿ ಪರೀಕ್ಷೆಯನ್ನು ಇದು ನಿಷೇದಿಸಿಲ್ಲ.

7] ಬಾಹ್ಯಾಕಾಶ ಒಪ್ಪಂದ (1967) ದಂತೆ ಬಾಹ್ಯಾಕಾಶದಲ್ಲಿ ಸೇನಾ ಚಟುವಟಿಕೆಗಳನ್ನು ನಿಷೇದಿಸಲಾಗಿದೆ.

8] ಭಾರತವು ಅಣ್ವಸ್ತ್ರ ತಗ್ಗಿಸುವ ಒಪ್ಪಂದ(1970)ಕ್ಕೆ ಸಹಿ ಹಾಕದಿರಲು ಕಾರಣಗಳು

1. ಅಣುಶಕ್ತಿಯನ್ನು ಹೊಂದಿದ ರಾಷ್ಟ್ರಗಳಿಗೆ ಅದರ ಬಳಕೆಗೆ ಸಂಬಂಧಿಸಿದಂತೆ ಯಾವ ನಿರ್ಬಂದಗಳೂ ಇಲ್ಲ.

2. ಭಾರತವು ಶಾಂತಿಯುತ ಕಾರ್ಯಗಳಿಗೆ ಅಣುಶಕ್ತಿಯನ್ನು ಬಳಸಿಕೊಳ್ಳಬೇಕೆಂಬ ನಿಲುವನ್ನು ಹೊಂದಿದೆ.

9] ಕ್ರಿ ಶ 1975 ರಲ್ಲಿ ಆದ ಬಯಾಲಾಜಿಕಲ್ ವೆಪನ್ ಕನ್‌ವೆನ್ಷನ್ (B.W.C.) ಒಪ್ಪಂದ. ಇದು ಜೈವಿಕ ಅಸ್ತ್ರಗಳ ಉತ್ಪಾದನೆ ಹಾಗೂ ದಾಸ್ತಾನುಗಳನ್ನು ನಿಷೇದಿಸಿದೆ.

10] ಕಾಮನ್‌ವೆಲ್ತ್ ಒಕ್ಕೂಟ 1931 ರಲ್ಲಿ ಅಸ್ಥಿತ್ವಕ್ಕೆ ಬಂದಿತು. ಬ್ರಿಟನ್ ದೇಶ ಇದಕ್ಕೆ ನಾಯಕತ್ವವನ್ನು ವಹಿಸಿಕೊಂಡಿದೆ.

12] ಯುರೋಪಿಯನ್ ಕಮ್ಯೂನಿಟಿಯ ಸಾಧನೆ ಎಂದರೆ ಯುರೋ ನಾಣ್ಯ ಪದ್ಧತಿಯನ್ನು ಜಾರಿಗೆ ತಂದಿರುವದು. ಯುರೋಪಿನಲ್ಲಿ ಸುಂಕಮುಕ್ತ ವ್ಯಾಪಾರ ರೂಡಿಸಿದ್ದು ಇದೊಂದು ಅದ್ಭುತ ಸಾದನೆ ಎಂದೇ ಹೇಳಬಹುದು.

13] ASEAN – ಇದರ ವಿಸ್ತ್ರುತ ರೂಪ ಆಗ್ನೇಯ ಏಷಿಯಾ ರಾಷ್ಟ್ರಗಳ ಒಕ್ಕೂಟ.

14] O A U - ಇದರ ವಿಸ್ತ್ರುತ ರೂಪ ಆಫ್ರಿಕನ್ ಒಕ್ಕೂಟ ಸಂಸ್ಥೆ.

ಇದರ ಗುರಿ ಆಫ್ರಿಕದಲ್ಲಿನ ವಸಾಹತುಗಳ ಸ್ವಾತಂತ್ರ್ಯ ಸಾಧನೆ ಹಾಗೂ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ನೀತಿಗಳ ಸಮನಯ ಸಾಧಿಸುವದು.

15] SAARC - ಇದರ ವಿಸ್ತುತ ರೂಪ ದಕ್ಷಿಣ ಏಷ್ಯಾ ಪ್ರದೇಶಿಕ ಸಹಕಾರ ಸಂಘ. ಇದರ ಆಡಳಿತ ಕಛೇರಿ ನೇಪಾಳದ ರಾಜದಾನಿ ಕಾಠ್ಮಂಡುವಿನಲ್ಲಿದೆ.

ಸಾರ್ಕನ ಸದಸ್ಯ ರಾಷ್ಟ್ರಗಳು – ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ನೇಪಾಳ, ಮಾಲ್ಡಿವ್ಸ್ ಮತ್ತು ಬೂತಾನ್

ಸಾರ್ಕ ಒಕ್ಕೂಟದ ಗುರಿ – ಪರಸ್ಪರ ಸಮಸ್ಯೆಗಳನ್ನು ಗುರುತಿಸಿ ಸಹಕಾರದಿಂದ ಪರಿಹಾರ ಕಂಡುಕೊಳ್ಳುವದು

ಭಾರತ – ಪಾಕಿಸ್ತಾನಗಳ ಭಿನ್ನಾಭಿಪ್ರಾಯಗಳಿಂದ 2002 ರಲ್ಲಿ ಸಾರ್ಕ ಸಂಸ್ಥೆಗೆ ಸ್ವಲ್ಪ ಹಿನ್ನೆಡೆಯಾಗಿದೆ.

18] ಏಷ್ಯಾ, ಆಫ್ರಿಕ ಹಾಗೂ ಲ್ಯಾಟಿನ್ ಅಮೇರಿಕಾದ ರಾಷ್ಟ್ರಗಳ ಗುಂಪಿಗೆ ತೃತೀಯ ಜಗತ್ತು ಎಂದು ನಾಮಕರಣ ಮಾಡಿದ ವ್ಯಕ್ತಿ ಎಂದರೆ ಅಲ್ಜೀರಿಯಾದ ಪ್ರಾಂಟ್ಜ ಫ್ಯಾನನ್.